ಬಂದಿದ್ದ ಅವರ ತಮ್ಮ ಹೇಳಿದರು. ನಿಮ್ಮ ಮಾವ ಆ ದಿನ ಮಧ್ಯಾಹ್ನದೂಟದಲ್ಲಿ ಬಹಳಷ್ಟು ಉಪ್ಪಿನ ಕಾಯಿ ಅನ್ನವನ್ನು ಕಲೆಸಿಕೊಂಡು ತಿಂದಿದ್ದರಂತೆ. ನಿಮಗೆ ಗೊತ್ತೇ? ಬೆಂಕಿಗೆ ಪೆಟ್ರೋಲ್ ಹೇಗೋ ಬಿಪಿಗೆ ಉಪ್ಪಿನ ಕಾಯಿಯೂ ಹಾಗೇ! ಮಲಗಿದ ಕೆಲವೇ ನಿಮಿಷಗಳಲ್ಲಿ ಬಿಪಿ ಎಲ್ಲ ನಿಯಂತ್ರಣಗಳನ್ನೂ ಮೀರಿ ಏರಿದೆ. ಒಂದು ಸಣ್ಣ ಅಜ್ಞಾನಕ್ಕೆ ಎಂತಹಾ ಶಿಕ್ಷೆ ನೋಡಿ? ಅಲ್ಲಾ, ನಮ್ಮ ಜನ ಧಾರಾವಾಹಿಯ ನಾಯಕಿ ಯಾವ ಸೀರೆ ಉಟ್ಟಳು, ಸಿನಿಮಾ ನಾಯಕ ಯಾವ ಕಾರಿನಿಂದ ಚರಂಡಿಗೆ ಬಿದ್ದ, ಯಾವ ರಾಜಕಾರಣಿ ಏನು ಡೋಂಗಿ ಕೊಚ್ಚಿದ ಎನ್ನುವ ಅನಗತ್ಯ ವಿಷಯಗಳಲ್ಲಿರುವ ಕುತೂಹಲದ ಸ್ವಲ್ಪವೇ ಸ್ವಲ್ಪ ಭಾಗವನ್ನು ತಮ್ಮ ಆರೋಗ್ಯದ ವಿಷಯಗಳ ಬಗ್ಗೆ ಖರ್ಚು ಮಾಡಿದ್ದರೂ ಸಾಕಿತ್ತು, ಆಸ್ಪತ್ರೆಗಳ ಮುಂದಿನ ರೋಗಿಗಳ ಸಾಲು ಇಷ್ಟು ದೊಡ್ಡದಿರುತ್ತಿರಲಿಲ್ಲ!''

ವಿಷಾದದಿಂದ ನುಡಿದರು ಡಾಕ್ಟರ್ ಪ್ರಶಾಂತ್. ನನಗೂ ಅವರ ಮಾತು ನಿಜ ಎನಿಸಿತು. ಉಪ್ಪಿನ ಕಾಯನ್ನ ತಿಂದ ಮಾವ, ಅವನು ಸ್ಟ್ರೋಕಾಗಿ ಬಿದ್ದಾಗ ಉಪ್ಪುನೀರು ಕುಡಿಸಿದ್ದ ರುಕ್ಮಿಣತ್ತೆ... ಇವರು ಒಂದೇ ಒಂದು ಸಲ ಯೋಚಿಸಿದ್ದರೆ?

ಬಹುಶಃ ಸ್ಟ್ರೋಕು ಹೆಮರೇಜಾಗಿ ಬದಲಾಗಿ, ನಾಣಿ ಮಾವನ ಸ್ಥಿತಿ ಇಷ್ಟೊಂದು ಗಂಭೀರವಾಗುತ್ತಿರಲಿಲ್ಲ.

ಡಾಕ್ಟರು ಮಾತ್ರ ಎಂದಿನಂತೆ, ''ಅದನ್ನು ಹೀಗೇ ಅಂತ ಹೇಳಬರುವುದಿಲ್ಲ'' ಎಂದು ಅನಿಶ್ಚಿತ ಉತ್ತರ ಕೊಟ್ಟು ಜಾರಿಕೊಂಡರು.

★★★

''ಅಪ್ಪನಿಗೆ ಬಿಪಿ ಎಲ್ಲಿಂದ ಬಂದಿರಬಹುದು?''

ಮಗುವಿನಂತೆ ಕೈ ಕಾಲು ಆಡಿಸುತ್ತಾ, ಎತ್ತೆತ್ತಲೋ ನೋಡುತ್ತಾ, ತನ್ನಷ್ಟಕ್ಕೆ ತಾನೇ ಏನೋ ಯೋಚಿಸುತ್ತಾ ಮಲಗಿದ್ದ ಅಪ್ಪನ ತಲೆಯನ್ನು ಮಮತೆಯಿಂದ ಸವರುತ್ತಾ ಕೇಳಿದಳು ಮಂದಾರ.

''ಬಿಪಿಗೇನು ಹೇಳು? ಬರಬೇಕೆಂದು ನಿರ್ಧರಿಸಿದರೆ ಹಲವಾರು ಬಾಗಿಲುಗಳಿವೆ. ಇನ್ ಫ್ಯಾಕ್ಟ್, ಕಿಂಡಿಗಳಿದ್ದರೂ ಸಾಕು. ಅನುವಂಶೀಯವಾಗಿ ಬರುತ್ತದೆ. ಆಹಾರ ಕ್ರಮದಿಂದ ಬರುತ್ತದೆ. ದೇಹದಲ್ಲಿ ಕೊಬ್ಬು ಹೆಚ್ಚಾದರೆ ಬರುತ್ತದೆ. ಅತಿಯಾದ ಚಿಂತೆ, ಸ್ಟ್ರೆಸ್‌ಗಳಿಂದ ಬರುತ್ತದೆ. ಇನ್ನು ಇವ್ಯಾವುದೂ ಅಲ್ಲದ ಎಷ್ಟೋ ಅಗೋಚರ ಬಾಗಿಲುಗಳೂ ಬಿಪಿಯನ್ನು ತೆರೆದು ಕರೆಯುತ್ತವೆ.''

ನನಗೆ ತಿಳಿದಿದ್ದನ್ನು ಹಾಗೆಯೇ ಹೇಳಿದೆ. ಮಂದಾ ಅವ್ಯಾವುದೂ ಅಲ್ಲ ಎಂಬಂತೆ ತಲೆ ಅಲ್ಲಾಡಿಸಿದಳು.

''ಇಲ್ಲ ಶರತ್. ಅಪ್ಪನಿಗೆ ಮೊದಲೇ ಬಿಪಿ ಇದ್ದರೆ, ಅದೂ ಅಷ್ಟೊಂದು ತೀವ್ರವಾಗಿದ್ದರೆ ಒಮ್ಮೆಯಾದರೂ ಅದು ಪ್ರಕಟವಾಗಬೇಕಿತ್ತಲ್ಲಾ? ಯೋಚಿಸಿ ನೋಡು? ಎಷ್ಟೋ ಜನ ಬಿಪಿ ಹೆಚ್ಚಿ, ತಲೆ ತಿರುಗಿ ಬೀಳುತ್ತಾರೆ. ಸುಸ್ತು ಅಂತ ಮಲಗ್ತಾರೆ. ತನ್ನ ಇರುವನ್ನು ಬಿಪಿ ಒಂದಲ್ಲ ಒಂದು ಥರಾ ಪ್ರಸ್ತುತ ಪಡಿಸುತ್ತೆ. ಆದರೆ, ಹೀಗೆ ಒಂದೇ ಸಲಕ್ಕೆ ನರ ಒಡೆದು ಹೆಮರಾಜಾಗೋದು ಅಂದ್ರೆ? ಅಸಹಜ ಅನಿಸಲ್ವಾ?''

''ಇಲ್ಲ ಮಂದಾರ. ಬಿಪಿ ಇರೋದೇ ಹಾಗೆ. ಅದಕ್ಕೇ ಅದನ್ನ ಸೈಲೆಂಟ್ ಕಿಲ್ಲರ್ ಅನ್ನೋದು. ಆವರಿಸಿಕೊಂಡು ಎಷ್ಟೋ ವರ್ಷದ ತನಕ ಬಿಪಿ ತನ್ನ ಇರುವಿನ ಸಣ್ಣ ಸುಳಿವನ್ನೂ ನೀಡದೇ ಹೋಗಬಹುದು. ಅಥವಾ ಹೌದೋ ಅಲ್ಲವೋ ಎಂಬಂತಹ ಚಿಕ್ಕ ಪುಟ್ಟ ಲಕ್ಷಣಗಳನ್ನು ತೋರಿಸಬಹುದು. ಆರೋಗ್ಯದ ಹುಮ್ಮಸ್ಸಿನಲ್ಲಿ ನಾವದನ್ನು ಕಡೆಗಣಿಸುತ್ತೇವೆ. ಮುಂದೆ ಯಾವುದೋ ಒಂದು ದಿನ, ಅದೃಷ್ಟದ ಪಾತ್ರೆ ಪೂರ್ತಿ ಖಾಲಿಯಾದಾಗ ಬಿಪಿಯ ಕೈ ಮೇಲಾಗಿ ಹೀಗಾಗುತ್ತೆ. ನಾವು ಎಷ್ಟೋ ಸಲ 'ಅವರಿಗೆ ಸಡನ್ನಾಗಿ ಹಾರ್ಟ್ ಅಟ್ಯಾಕ್ ಆಯ್ತು' ಅಂತೀವಲ್ಲಾ? ಅದೇನು